# ಸಿನಿಮಾಕ್ಕೆ ಕಾಯುತ್ತೇನೆ



**ದೀಪಿಕಾ ಸಿ.ಎ.**

**ಕಲರ್ಸ್‌ನ 'ಕುಲವಧು' ಧನ್ಯಾ**

★ ***ನಟನೆಯ ಹಿಂದಿನ ಕಲಾಭ್ಯಾಸ ಹೇಗಿತ್ತು?***

ನಮ್ಮ ಮನೆಯ ವಾತಾವರಣವೇ ಕಲಾ ಸೇವಕರದ್ದು. ನನ್ನ ಮೂರನೇ ವಯಸ್ಸಿನಲ್ಲಿಯೇ ಶಾಸ್ತ್ರೀಯವಾಗಿ ನೃತ್ಯ ಅಭ್ಯಾಸ ಆರಂಭಿಸಿದೆ. ನನ್ನ ಅತ್ತೆ ಕುಮುದಿನಿ ಅವರೇ ನೃತ್ಯದ ಗುರು. ದೀರ್ಘಕಾಲ ನೃತ್ಯಾಭ್ಯಾಸ ಮಾಡಿದೆ. ಜೊತೆಗೆ ನನ್ನ ತಂದೆ ಆನಂದ್ ಕುಮಾರ್ ಸಂಗೀತ ಶಿಕ್ಷಕರೂ ಹೌದು. ಅತ್ತೆ ಮತ್ತು ಅಪ್ಪನ ಮಾರ್ಗದರ್ಶನದಲ್ಲಿ ನೃತ್ಯ– ಸಂಗೀತವನ್ನು ಒಂದುಮಟ್ಟಿಗೆ ಅಭ್ಯಾಸ ಮಾಡಿದೆ. ಅದರ ಜೊತೆ ಶಿಕ್ಷಣ. ಬಿಕಾಂ ಮುಗಿಸುತ್ತಿದ್ದಂತೆ 'ಕುಲವಧು'ವಿನಲ್ಲಿ ಧನ್ಯಾ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ.

★ ***ಟಿವಿಗೆ ಹೇಗೆ ಪ್ರವೇಶವಾಯಿತು?***

ಕಾಲೇಜಿನಲ್ಲಿ ಡಾನ್ಸ್ ಅಂದರೆ ದೀಪಿಕಾ ಎನ್ನುವಷ್ಟು ಹೆಸರುವಾಸಿಯಾಗಿದ್ದೆ. ಹೀಗಿರುವಾಗ ಆಡಿಷನ್‌ಗೆ ಹೋಗುವಂತೆ ಸ್ನೇಹಿತರು ಪ್ರೇರೇಪಿಸಿದರು. ಆಡಿಷನ್‌ಗೆ ಹೋಗಿ ಯಾರ ಶಿಫಾರಸ್ಸುಗಳಿಲ್ಲದೆ ಪಾತ್ರವನ್ನು ಗಿಟ್ಟಿಸಿಕೊಂಡು ಬಂದೆ. ಮನೆಯಲ್ಲಿ ಶುರುವಿನಲ್ಲಿ ಸಹಜವಾಗಿ ವಿರೋಧ ಇತ್ತು. ಎಲ್ಲ ಹಂತದಲ್ಲಿಯೂ ನನ್ನ ಬೆಂಬಲಕ್ಕೆ ಇದ್ದ ಅಪ್ಪ– ಅಮ್ಮ ಏಕೋ ಹಿಂದೇಟು ಹಾಕುತ್ತಿದ್ದಾರೆ ಎಂದು ಸಹಜವಾಗಿ ನನಗೂ ಕಸಿವಿಸಿ ಆಯಿತು. ಚಿತ್ರೀಕರಣದ ವಾತಾವರಣ ನೋಡಿದ ನಂತರ ಅಪ್ಪ ಖುಷಿಯಿಂದಲೇ ಬೆಂಬಲಿಸಿದರು. ಅಮ್ಮ (ಹರಿಣಿ) ಶೂಟಿಂಗ್‌ಗೆ ಹೋಗುವಾಗ ನನ್ನ ಕೆಲಸವನ್ನೂ ಅವರೇ ಪೂರೈಸಿ ಸಹಕರಿಸುತ್ತಾರೆ. ಈಗ ನಟನೆಯನ್ನೇ ವೃತ್ತಿಯಾಗಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬಂದಿದ್ದೇನೆ. ಮುಂದಿನ ದಿನಗಳಲ್ಲಿ ಸಿನಿಮಾಗಳಲ್ಲಿಯೂ ನಟಿಸುತ್ತೇನೆ. ತೆಲುಗು– ತಮಿಳಿನಲ್ಲಿ ಒಂದೆರಡು ಅವಕಾಶ ಬಂದಿದ್ದವು. ಒಳ್ಳೆಯ ಕಥೆಗಾಗಿ ಕಾಯುತ್ತಿದ್ದೇನೆ.

★ ***'ಧನ್ಯಾ'ಳ ಪಾತ್ರ ನಿರ್ವಹಣೆ ಹೇಗೆನಿಸುತ್ತದೆ?***

ತ್ಯಾಗಮಯಿ ಧನ್ಯಾ ನನಗೆ ತುಂಬಾ ಹಿಡಿಸಿದ್ದಾಳೆ. ನಾನು ಪಾತ್ರವನ್ನು ಧನ್ಯಾಳಾಗಿಯೇ ನಟಿಸುತ್ತಿದ್ದೇನೆ. ಇದಕ್ಕಾಗಿ ನಾನು ಹೋಂ ವರ್ಕ್ ಕೂಡ ಮಾಡಿಕೊಂಡು ಹೋಗಿರುತ್ತೇನೆ. ಶೂಟಿಂಗ್ ಮನೆಗೆ ಹೋದ ತಕ್ಷಣ ಸ್ಕ್ರಿಪ್ಟ್ ಕೊಡುತ್ತಾರೆ. ಓದಿ ಪಾತ್ರದ ನಿರ್ವಹಣೆಗೆ ಮೂರು ನಾಲ್ಕು ರೀತಿಯಲ್ಲಿ ಅಭಿವ್ಯಕ್ತಿಸಲು ಸಿದ್ಧಳಾಗಿರುತ್ತೇನೆ. ನನ್ನ ಟೇಕ್ ಬರುವ ಹೊತ್ತಿಗೆ ನಿರ್ದೇಶಕರ ಜೊತೆ ನನ್ನ ಸಿದ್ಧತೆಯನ್ನು ಚರ್ಚಿಸಿ ಅಭಿನಯಿಸುತ್ತೇನೆ. ಇದರಿಂದ ಪಾತ್ರದ ನಿರ್ವಹಣೆ ಕೂಡ ಚೆನ್ನಾಗಿ ಬರುತ್ತಿದೆ. ಮೂಲತಃ ನನ್ನ ಸ್ವಭಾವಕ್ಕೂ ಪಾತ್ರಕ್ಕೂ ಹೆಚ್ಚು ಹೊಂದಾಣಿಕೆ ಇದೆ. ವೈಯಕ್ತಿಕವಾಗಿ ಪಾತ್ರದಷ್ಟು ತ್ಯಾಗಮಯಿ ಅಲ್ಲ. ಆದರೂ ಆದರಣೀಯ ಗುಣವುಳ್ಳ ಆ ಪಾತ್ರ ನಿರ್ವಹಣೆ ಸಲೀಸಾಗುತ್ತಿದೆ. ಪಾತ್ರವೂ ಕೂಡ ಜೀವನ ಮೌಲ್ಯವನ್ನು ಪ್ರತಿಪಾದಿಸುತ್ತದೆ. ಸನ್ನಡತೆಯ ಮೂರ್ತಿ ರೂಪ ಸಹಜವಾಗಿ ಎಲ್ಲರಿಗೂ ಇಷ್ಟವಾಗುತ್ತದೆ.

★ ***ಕಲರ್ಸ್ ಕನ್ನಡದ ಅನುಬಂಧದ ಸ್ಪರ್ಧೆ ಹೇಗಿತ್ತು?***

ಕಲರ್ಸ್ ಕುಟುಂಬ ಅನುಬಂಧದ ನೆಪದಲ್ಲಿ ಒಂದೆಡೆ ಸೇರಿತ್ತು. ಸ್ನೇಹ ಮಿಲನ ಕಾರ್ಯಕ್ರಮ ತುಂಬಾ ಚೆನ್ನಾಗಿತ್ತು. ಡಾನ್ಸ್ ಸೇರಿದಂತೆ ಹಲವು ಮನೋರಂಜನಾ ಕಾರ್ಯಕಮಗಳನ್ನು ಎಲ್ಲರೂ ಒಟ್ಟಿಗೆ ಸವಿದೆವು. ಕಳೆದ ಕೆಲವು ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ. ನಮ್ಮ ತಂಡಕ್ಕೆ ಕಳೆದ ವರ್ಷ ಯಾವುದೇ ಬಹುಮಾನ ಸಿಗಲಿಲ್ಲ. ಈ ವರ್ಷ ನಿರೀಕ್ಷೆಯಿದೆ.

★ ***ನಿಮಗೆ ಸೆಲೆಬ್ರಿಟಿ ಇಮೇಜ್ ಬಂದಿದೆ ಎನ್ನಿಸುತ್ತಿದೆಯಾ?***

ಟಿವಿ ಎಂದರೆ ಜನಪ್ರಿಯತೆ ಸಹಜವಾಗಿ ಸಿಗುತ್ತದೆ. ನನಗೆ ಹೆಚ್ಚುಗಾರಿಕೆಯ ಭ್ರಮೆ ಇಲ್ಲ. ಸಾರ್ವಜನಿಕವಾಗಿ ನಮ್ಮನ್ನು ಸುಲಭವಾಗಿ ಗುರುತಿಸುತ್ತಾರೆ. ಧನ್ಯಾ ಎಂದೇ ಜನ ಕೂಗುವುದು. ಭೇಟಿಯಾದವರಲ್ಲಿ ಕೆಲವರು ನಗುಮೊಗದಿಂದ ಫೋಟೋ ತೆಗೆಸಿಕೊಳ್ಳುವ ಇಂಗಿತವನ್ನು ವ್ಯಕ್ತಪಡಿಸುತ್ತಾರೆ. ಕೈ ಕುಲುಕುತ್ತಾರೆ. ಒಟ್ಟಾರೆ ಅವರ ಪ್ರೀತಿ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂದೇ ಭಾವಿಸುತ್ತೇನೆ. ಅದನ್ನು ನಿಭಾಯಿಸಿಕೊಂಡು ಹೋಗುವುದು ನನ್ನ ಮೇಲಿದೆ.

■ ರಾಗು